ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	761
ಸದಸ್ಯರ ಹೆಸರು	ಶ್ರೀ ಹೆಚ್.ಎಂ.ರೇವಣ್ಣ
ಉತ್ತರಿಸಬೇಕಾದ ದಿನಾಂಕ	17.12.2018
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಯಾವ ಯಾವ ಜಿಲ್ಲೆಗಳ ಇಲಾಖೆಯ ಪತ್ರಾಂಕಿತ ಅಧಿಕಾರಿಗಳಿಗೆ (ಗೆಜೆಟೆಡ್ ಮ್ಯಾನೇಜರ್‌ಗಳಿಗೆ) ಪ್ರಭಾರ ಜಿಲ್ಲಾ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಬಿ ವೃಂದದ ಈ ಕೆಳಕಂಡ ಪತ್ರಾಂಕಿತ ವ್ಯವಸ್ಥಾಪಕರುಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಜಿಲ್ಲೆಗಳ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಯ ಪ್ರಭಾರವನ್ನು ವಹಿಸಲಾಗಿರುತ್ತದೆ.

ಕ್ರ ಸಂ	ಪತ್ರಾಂಕಿತ ವ್ಯವಸ್ಥಾಪಕರ ಹೆಸರು ಶ್ರೀ/ಶ್ರೀಮತಿ	ಜಿಲ್ಲಾ ಅಧಿಕಾರಿಯ ಹುದ್ದೆಯ ಪ್ರಭಾರ ವಹಿಸಿರುವ ಜಿಲ್ಲೆಯ ಹೆಸರು
1	ಕುಮಾರ್	ಶಿವಮೊಗ್ಗ ಜಿಲ್ಲೆ
2	ರಾಣಿ	ಮಂಡ್ಯ ಜಿಲ್ಲೆ
3	ಮುದುಕಣ್ಣನವರ್	ಚಿತ್ರದುರ್ಗ ಜಿಲ್ಲೆ
4	ಮೊಹಮ್ಮದ್ ಸಿಯಾರ್	ದಕ್ಷಿಣ ಕನ್ನಡ ಜಿಲ್ಲೆ
5	ಮೊನಪ್ಪ ಗೊನಾಲ್	ರಾಯಚೂರು ಜಿಲ್ಲೆ
6	ಹೆಚ್.ಎ.ಜಮಖಾನೆ	ಹಾವೇರಿ ಜಿಲ್ಲೆ
7	ಚಂದ್ರಕಾಂತ ಬಿ. ಮುರನಾಳ್	ಧಾರವಾಡ ಜಿಲ್ಲೆ
8	ಆರ್.ಪಿ.ದೇವಮಾನೆ	ಚಿಕ್ಕಬಳ್ಳಾಪುರ ಜಿಲ್ಲೆ
9	ಹೊಸಮನಿ ಆರ್.ಬಿ.	ಗದಗ್ ಜಿಲ್ಲೆ
10	ಜಿ.ಬಿ.ಬಾರಕೇರ	ಬಾಗಲಕೋಟೆ ಜಿಲ್ಲೆ
11	ವಿಠ್ಠಲ ಮದ್ನೂರ್	ಯಾದಗಿರಿ ಜಿಲ್ಲೆ
12	ಎನ್. ಭಾಗ್ಯ	ಬೀದರ್ ಜಿಲ್ಲೆ

ಕ್ರ ಸಂ	ಪ್ರಶ್ನೆ	ಉತ್ತರ
ಆ	ಈ ರೀತಿ ನೇಮಕ ಮಾಡುವಾಗ ಜೇಷ್ಠತೆಯನ್ನು (ಸೀನಿಯಾರಿಟಿಯನ್ನು) ಪಾಲನೆ ಮಾಡಲಾಗಿದೆಯೇ;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಮಂಜೂರಾಗಿರುವ 30 ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಗಳ ಪೈಕಿ 10 ಹುದ್ದೆಗಳಲ್ಲಿ ಮಾತ್ರ ಖಾಯಂ ಇಲಾಖಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಉಳಿದ 20 ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳ ಹುದ್ದೆ ಖಾಲಿ ಇರುತ್ತದೆ. ಸದರಿ ಖಾಲಿ ಹುದ್ದೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯ 18 ಅಧಿಕಾರಿಗಳು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 248 ಪಕಸೇ 2018 (ಭಾ), ದಿ:11.7.2018 ರಲ್ಲಿ ಹಿಂದಕ್ಕೆ ಪಡೆಯಲಾಗಿದ್ದರಿಂದ, ಜಿಲ್ಲಾ ಅಧಿಕಾರಿಗಳ ಹುದ್ದೆಗಳು ಖಾಲಿಯಾಗಿರುತ್ತದೆ. ಜಿಲ್ಲೆಗಳಲ್ಲಿ ಇಲಾಖಾ

		ಕಾರ್ಯಕ್ರಮಗಳ ಸಮರ್ಪಕ ಆಡಳಿತ ಹಿತದೃಷ್ಟಿಯಿಂದ ಮೇಲಿನ 12 ಪತ್ರಾಂಕಿತ ವ್ಯವಸ್ಥಾಪಕರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹುದ್ದೆಯ ಪ್ರಭಾರವನ್ನು ತಾತ್ಕಾಲಿಕವಾಗಿ ವಹಿಸಲಾಗಿರುತ್ತದೆ. ಇದು ಸಂಪೂರ್ಣ ತಾತ್ಕಾಲಿಕ ವ್ಯವಸ್ಥೆಯಾಗಿದ್ದು, ಇದಕ್ಕೆ ಯಾವುದೇ ಜೇಷ್ಠತೆ ನಿಯಮ ಅನ್ವಯಿಸುವುದಿಲ್ಲ.
ಇ	ಇಲ್ಲದಿದ್ದಲ್ಲಿ ಯಾಕೆ ಪಾಲನೆ ಮಾಡಿರುವುದಿಲ್ಲ;	ಅನ್ವಯಿಸುವುದಿಲ್ಲ.
ಈ	ಪಾಲನೆ ಮಾಡದ ಅಧಿಕಾರಿ / ನೌಕರರ ಮೇಲೆ ಕೈಗೊಂಡಿರುವ ಕ್ರಮಗಳೇನು?	ಅನ್ವಯಿಸುವುದಿಲ್ಲ.

ಸಂಖ್ಯೆ: ಹಿಂವಕ 574 ಬಿಇಟಿ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು